ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಆಯುಕ್ತಾಲಯ
ಕಾಳಿದಾಸ ಮಾರ್ಗ, ಕೆ.ಜಿ.ರಸ್ತೆ, ಬೆಂಗಳೂರು – 560 009.

ಸಂಖ್ಯೆ: ಕಪಂರಾಆ/ಅಭಿವೃದ್ಧಿ/357/2022 ದಿನಾಂಕ:22.07.2022

**ಸುತ್ತೋಲೆ**

**ವಿಷಯ:** ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ **"ಓದುವ ಬೆಳಕು"** ಕಾರ್ಯಕ್ರಮದ ಅಂಗವಾಗಿ **'ಗ್ರಾಮ ಚದುರಂಗ(Chess) ಆಟ ಆಡೋಣ ಅಭಿಯಾನ'** ಕಾರ್ಯಕ್ರಮವನ್ನು ಆಯೋಜಿಸುವ ಕುರಿತು.

***

ತಮಗೆ ತಿಳಿದಿರುವಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಮಕ್ಕಳನ್ನು ಓದುವುದು ಮತ್ತು ಕಲಿಕೆಯಲ್ಲಿ ತೊಡಗಿಸಿಕೊಳ್ಳಲು "ಓದುವ ಬೆಳಕು" ಕಾರ್ಯಕ್ರಮವನ್ನು ಆರಂಭಿಸಿತು. ಸದರಿ ಕಾರ್ಯಕ್ರಮದಲ್ಲಿ ಸರ್ಕಾರಿ ಶಾಲಾ ಮಕ್ಕಳನ್ನು, ವಿಶೇಷವಾಗಿ ಗ್ರಾಮೀಣ ಮಕ್ಕಳನ್ನು, ವ್ಯವಸ್ಥಿತವಾಗಿ ಕಲಿಕಾ ಕ್ಷೇತ್ರಕ್ಕೆ ಮರಳಿ ತರುವ ಗುರಿಯನ್ನು ಹೊಂದಲಾಗಿತ್ತು, ಗ್ರಂಥಾಲಯಗಳನ್ನು ಗ್ರಾಮೀಣ ಜ್ಞಾನ ಕೇಂದ್ರಗಳನ್ನಾಗಿಸಲು ಗ್ರಂಥಾಲಯಗಳ ನವೀಕರಣ, ಡಿಜಿಟಲೀಕರಣ ಸೇರಿದಂತೆ ವಿವಿಧ ಕ್ರಮಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ.

ಈ ವರ್ಷವು, ದಿನಾಂಕ: 20 ಜುಲೈ 2022 ರಂದು ನಡೆದ **'ಅಂತರಾಷ್ಟ್ರೀಯ ಚೆಸ್ ದಿನದ'** ಅಂಗವಾಗಿ**"ಓದುವ ಬೆಳಕು"** ಕಾರ್ಯಕ್ರಮದ ಅಡಿಯಲ್ಲಿ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ **'ಗ್ರಾಮ ಚದುರಂಗ(Chess) ಆಟ ಆಡೋಣ ಅಭಿಯಾನ'** ಕಾರ್ಯಕ್ರಮವನ್ನು ಆಯೋಜಿಸುವ ಮೂಲಕ ಗ್ರಾಮೀಣ ಭಾಗದ ಮಕ್ಕಳ ಭೌದ್ಧಿಕ ಸಾಮರ್ಥ್ಯಗಳನ್ನು ಹೆಚ್ಚಿಸಲು ಸಹಾಯ ಮಾಡುವುದು ಮತ್ತು ಮಕ್ಕಳು ಇತರ ಮಕ್ಕಳೊಂದಿಗೆ ಹೊಂದಿಕೊಳ್ಳಲು, ತಾಳ್ಮೆ ಕಲಿಯಲು ಸಹಾಯ ಮಾಡುವುದು ಮತ್ತು ಪರಸ್ಪರ ಗೌರವ ಮತ್ತು ನ್ಯಾಯಸಮ್ಮತತೆಯನ್ನು ಚದುರಂಗ(Chess) ಆಟವು ಉತ್ತೇಜಿಸುವುದು. ಚದುರಂಗ(Chess) ಆಟವು ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಸಹಕರಿಸುವುದು.

ಈ ಸಂದರ್ಭದಲ್ಲಿ, ಗ್ರಾಮ ಪಂಚಾಯತಿ ಗ್ರಂಥಾಲಯಗಳಲ್ಲಿ **'ಗ್ರಾಮ ಚದುರಂಗ(Chess) ಆಟ ಆಡೋಣ ಅಭಿಯಾನ'** ಕಾರ್ಯಕ್ರಮವನ್ನು ಆಯೋಜಿಸಲು ಈ ಕೆಳಕಂಡ ನಿರ್ದೇಶನಗಳನ್ನು ಪಾಲಿಸಿ ಅಭಿಯಾನ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದು.

- ಗ್ರಾಮ ಪಂಚಾಯಿತಿಯಿಂದ ಚದುರಂಗದ ಆಟ (Chess) ಬೋರ್ಡ್/ ಸೆಟ್‌ನ್ನು ಖರೀದಿಸಿ ಗ್ರಾಮ ಪಂಚಾಯಿತಿ ಗ್ರಂಥಾಲಯಕ್ಕೆ ಒದಗಿಸುವುದು.

- ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಚೆಸ್ ಆಟವನ್ನು ಉತ್ತಮವಾಗಿ ಕಲಿತವರಿಂದ/ಶಾಲಾ ಶಿಕ್ಷಕರಿಂದ/NGO ಸಂಸ್ಥೆಗಳಿಂದ ಚೆಸ್ ಆಟದ ಕುರಿತು ಗ್ರಾಮೀಣ ಮಕ್ಕಳಿಗೆ ಪರಿಚಯ ಪಡಿಸುವುದು.
- ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ನಿಯಮಿತವಾಗಿ ಚದುರಂಗ(Chess) ಆಟವನ್ನು ಆಡಲು ಅವಕಾಶ ಕಲ್ಪಿಸುವುದು ಮತ್ತು ನಡೆಸುವುದು. ವಿಶೇಷವಾಗಿ, ದಿನಾಂಕ: 20 ಜುಲೈ 2022 ರಂದು ನಡೆದ 'ಅಂತರಾಷ್ಟ್ರೀಯ ಚೆಸ್ ದಿನದ' ಅಂಗವಾಗಿ ಮುಂದಿನ ವಾರ FIDE Chess Olympiad ಚೆನ್ನೈನಲ್ಲಿ ಪ್ರಾರಂಭಗೊಳ್ಳುವುದು. ಈ ಪ್ರಯುಕ್ತ ರಾಜ್ಯದ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿಯೂ ಮುಂದಿನ ವಾರ ಗ್ರಾಮದ ಮಕ್ಕಳಿಗೆ ಚದುರಂಗ (Chess) ಪಂದ್ಯಾವಳಿಯನ್ನು ಆಯೋಜಿಸುವುದು.
- 'ಗ್ರಾಮ ಚದುರಂಗ(Chess) ಆಟ ಆಡೋಣ ಅಭಿಯಾನದ' ಪ್ರಯುಕ್ತ ಪ್ರತಿ ವಾರವು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಾಲೆಗಳಲ್ಲಿ ಚದುರಂಗ(Chess) ಆಟವನ್ನು ಆಯೋಜಿಸುವುದು.
- ಗ್ರಾಮ ಪಂಚಾಯಿತಿ ಗ್ರಾಂಥಾಲಯಗಳಿಂದ ಆಯೋಜಿಸುವ ಚದುರಂಗ(Chess) ಪಂದ್ಯಾವಳಿಗಳಲ್ಲಿ ವಿಜೇತರಾದ ಮಕ್ಕಳಿಗೆ ತಾಲ್ಲೂಕು ಮಟ್ಟದಲ್ಲಿ ಚದುರಂಗ(Chess) ಪಂದ್ಯಾವಳಿಯನ್ನು ಆಯೋಜಿಸುವುದು.
- ತಾಲ್ಲೂಕು ಮಟ್ಟದಲ್ಲಿ ಚದುರಂಗ(Chess) ಪಂದ್ಯಾವಳಿಗಳಲ್ಲಿ ವಿಜೇತರಾದ ಮಕ್ಕಳಿಗೆ ಜಿಲ್ಲೆ ಪಂಚಾಯಿತಿ ವತಿಯಿಂದ ಚದುರಂಗ(Chess) ಆಟ ಆಡುವ ಕುರಿತು NGO ಸಂಸ್ಥೆಗಳ ಸಹಕಾರ ಪಡೆದು ತರಬೇತಿಯನ್ನು ಆಯೋಜಿಸುವುದು.
- 'ಗ್ರಾಮ ಚದುರಂಗ(Chess) ಆಟ ಆಡೋಣ ಅಭಿಯಾನ' ಕಾರ್ಯಕ್ರಮವನ್ನು ಆಯೋಜಿಸಲು ಸಾಧ್ಯವಿರುವಲ್ಲಿ ಸ್ವಯಂಸೇವಾ ಸಂಸ್ಥೆಗಳ ಅಥವಾ NGO ಗಳ ಸಹಕಾರ ಪಡೆಯುವುದು.
- ಈ ಅಭಿಯಾನದ ಚಟುವಟಿಕೆಯನ್ನು ಗ್ರಾಮ ಪಂಚಾಯಿತಿ ಗ್ರಂಥಾಲಯ ಆವರಣದಲ್ಲಿ ಆಯೋಜಿಸುವುದು.
- ಗ್ರಾಮ ಪಂಚಾಯಿತಿಗಳಲ್ಲಿ 'ಗ್ರಾಮ ಚದುರಂಗ(Chess) ಆಟ ಆಡೋಣ ಅಭಿಯಾನದ' ಮುಖಾಂತರ ಗ್ರಾಮ ಪಂಚಾಯಿತಿಗಳಲ್ಲಿ ಚದುರಂಗ(Chess) ಆಟವಾಡಲು ಆಸಕ್ತಿ ಇರುವ ಮಕ್ಕಳನ್ನು ಪ್ರೋತ್ಸಾಹಿಸುವುದು.
- 'ಗ್ರಾಮ ಚದುರಂಗ(Chess) ಆಟ ಆಡೋಣ ಅಭಿಯಾನದ' ಚಟುವಟಿಕೆಗಳಲ್ಲಿ ಉತ್ತಮವಾಗಿ ಗುರುತಿಸಿಕೊಂಡ ಮಕ್ಕಳನ್ನು ಪ್ರೋತ್ಸಾಹಿಸಲು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅಥವಾ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳು ಅವರಿಂದ ಸಹಿ ಮಾಡಿದ ಪ್ರಶಂಸನಾ ಪತ್ರವನ್ನು ವಿತರಿಸುವುದು.

ಈಗಾಗಲೇ ರಾಜ್ಯದಲ್ಲಿ 18 ಲಕ್ಷಕ್ಕಿಂತ ಹೆಚ್ಚು ಮಕ್ಕಳು ಗ್ರಾಮ ಪಂಚಾಯಿತಿ ಗ್ರಂಥಾಲಯಕ್ಕೆ ನೋಂದಾಯಿತರಾಗಿರುತ್ತಾರೆ. ಮಕ್ಕಳಿಗೆ ವಿವಿಧ ಚಟುವಟಿಕೆಗಳನ್ನು ಆಯೋಜಿಸುವುದರ ಮೂಲಕ ಇನ್ನು ಹೆಚ್ಚಿನದಾಗಿ ಮಕ್ಕಳನ್ನು ಗ್ರಂಥಾಲಯಕ್ಕೆ ಉಚಿತವಾಗಿ ನೋಂದಾಯಿಸುವ ಗುರಿಯನ್ನು ಎಲ್ಲಾ ಗ್ರಾಮ ಪಂಚಾಯಿತಿ ಗ್ರಂಥಾಲಯಗಳು ಹೊಂದುವುದು.

**'ಗ್ರಾಮ ಚದುರಂಗ(Chess) ಆಟ ಆಡೋಣ ಅಭಿಯಾನ' ಕಾರ್ಯಕ್ರಮವನ್ನು ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಆಯೋಜಿಸಲು ತಗಲುವ ವೆಚ್ಚವನ್ನು ಗ್ರಾಮ ಪಂಚಾಯಿತಿಗಳಿಂದ ಸಂಗ್ರಹಿಸಲಾಗುವ ಲೈಬ್ರರಿ ಕರ ಮತ್ತು ಗ್ರಾಮ ಪಂಚಾಯಿತಿಯ ಸ್ವಂತ ನಿಧಿಯಿಂದ ಭರಿಸುವುದು.**

22-07-22

ಆಯುಕ್ತರು
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಬೆಂಗಳೂರು.

KSP

**ಇವರಿಗೆ:**

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳು (ಆಯಾ ತಾಲ್ಲೂಕು ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಿಗೆ ಈ ಸುತ್ತೋಲೆ ಪ್ರತಿಯನ್ನು ತಲುಪಿಸುವ ವ್ಯವಸ್ಥೆ ಮಾಡುವಂತೆ ಸೂಚಿಸಲಾಗಿದೆ.)
3. ರಾಜ್ಯದ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು(ಆಯಾಯ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಂಥಾಲಯಗಳಿಗೆ ಈ ಸುತ್ತೋಲೆಯ ಪ್ರತಿಯನ್ನು ತಲುಪಿಸುವ ವ್ಯವಸ್ಥೆ ಮಾಡುವಂತೆ ಸೂಚಿಸಲಾಗಿದೆ.)
4. ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ರವರಿಗೆ ಸೂಕ್ತ ಬೆಂಬಲ ಮತ್ತು ಸಹಕಾರ ನೀಡಲು ಕ್ರಮವಹಿಸುವುದು.
5. ಮಾಹಿತಿ ಕೇಂದ್ರ/ವೆಬ್‌ಸೈಟ್, ಗ್ರಾಅಪ ಇಲಾಖೆ.

**ಪ್ರತಿ:**

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.-560 001
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.-560 001
3) ಕಛೇರಿ ಪ್ರತಿ.